# ರಾಜತಾಂತ್ರಿಕ ಶಿಷ್ಟಾಚಾರ

43ನೇ ಪುಟದಿಂದ

ಇತ್ತೀಚೆಗೆ ಸ್ಥಳೀಯ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರ ಆಯ್ಕೆಯಲ್ಲಿ ಮೀಸಲಾತಿಗೆ ಅವಕಾಶ ಮಾಡಿಕೊಡಲಾಗಿದೆ ತಾನೆ? ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳೂ ಮೀಸಲಾತಿಯ ಆಧಾರದ ಮೇಲೆಯೇ ನೀಡಲ್ಪಡುತ್ತಿವೆಯಷ್ಟೆ! ನಮ್ಮೂರಿನ ಎಂಕ್ಟ ಪರಿಶಿಷ್ಟ ಜಾತಿಯ ಮೀಸಲಾತಿಯಡಿ ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದ.

ಅವನ ಅದೃಷ್ಟಕ್ಕೆ ಆ ವರ್ಷ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿಗೇ ಮೀಸಲಾಗಿತ್ತು. ಸರಿ, ಎಂಕ್ಟ ಪಂಚಾಯತಿ ಅಧ್ಯಕ್ಷನಾದ. ಅವನು ಕೂಲಿನಾಲಿ ಮಾಡಿ ಜೀವನ ಸಾಗಿಸುತ್ತಿದ್ದವನು. ಅವನಿಗೆ ಕೆಲಸ ಕೊಡುತ್ತಿದ್ದ ಅವನ ಒಡೆಯರಾದ ರಾಯರೂ ಆ ವರ್ಷ ಬೇರೊಂದು ವಾರ್ಡ್‌ನಿಂದ ಸಾಮಾನ್ಯ ಸ್ಥಾನದ ಅಡಿಯಲ್ಲಿ ಆಯ್ಕೆಯಾಗಿ ಉಪಾಧ್ಯಕ್ಷರಾದರು. ಗ್ರಾಮ ಪಂಚಾಯತಿ ಸಭೆಗಳಲ್ಲಿ ಸ್ಥಾನ ಬಲದ ಆಧಾರದಲ್ಲಿ ಅಧ್ಯಕ್ಷನಾದ ಕೂಲಿಯಾಳು ಎಂಕ್ಟ ಮಧ್ಯದ ಕುರ್ಚಿಯಲ್ಲಿ, ಅವನ ಪಕ್ಕದಲ್ಲಿ ಉಪಾಧ್ಯಕ್ಷರಾದ ಅವನ ಒಡೆಯ ರಾಯರು ಕುಳಿತುಕೊಳ್ಳಬೇಕಾಯಿತು! ಹಿಂದೆಲ್ಲ ತಾವೇ ಪ್ರೆಸಿಡೆಂಟರಾಗಿ ದರ್ಪ ಮೆರೆಯುತ್ತಿದ್ದ ರಾಯರು ಮುಳ್ಳಿನ ಮೇಲೆ ಕುಳಿತು ಚಡಪಡಿಸುವಂತೆ ಮಾಡಿವೆ ಈ ಮೀಸಲಾತಿ ಹಾಗೂ ಪ್ರೋಟೋಕಾಲ್! ಗಳಿಗೆಗೊಮ್ಮೆ ಅಧ್ಯಕ್ಷ ಎಂಕ್ಟನ, 'ಏನ್ರೀ ಉಪಾಧ್ಯಕ್ಸರೆ?' ಎನ್ನುವ ಚುರುಮುರಿ ಒಗ್ಗರಣೆ ಬೇರೆ! ಹೇಗಾಗಿರಬೇಡ ರಾಯರಿಗೆ? ಮೊದಲೆಲ್ಲ ಊರಿನ ಯಾವುದೇ ಸಮಾರಂಭಗಳ ಆಮಂತ್ರಣ ಪತ್ರಿಕೆಗಳಲ್ಲಿ ಪ್ರೆಸಿಡೆಂಟು ರಾಯರ ಹೆಸರು ಎಲ್ಲಕ್ಕಿಂತಲೂ ಮೇಲೆ ರಾರಾಜಿಸುತ್ತಿತ್ತು. ಈಗ ಅಧ್ಯಕ್ಷ ಎಂಕ್ಟನ ಹೆಸರಿನ ನಂತರ ಉಪಾಧ್ಯಕ್ಷ ರಾಯರ ಹೆಸರನ್ನು ಹಾಕಲಾಗುತ್ತಿದೆ! 'ಈ ಮೀಸಲಾತಿ ಮತ್ತು ಪ್ರೋಟೋಕಾಲ್ ಕಾಲ್ದಾಗೆ ಸುಕ ಇಲ್ದಂಗಾಗೋತು' ಎನ್ನುತ್ತ ಗಾಯದ ಮೇಲೆ ಉಪ್ಪು ಸುರಿದಂತೆ ಚಡಪಡಿಸುತ್ತಿದ್ದಾರೆ ನಮ್ಮ ರಾಯರು!

ನಮ್ಮ ಆಫೀಸಿನಲ್ಲಿ ಗುಮಾಸ್ತನಾಗಿರುವ ಮಹೇಶ ಕಾಲೇಜಿಗೆ ಹೋಗುತ್ತಿದ್ದಾಗಿನಿಂದಲೂ ಒಳ್ಳೆಯ ಬರಹಗಾರನೆಂದು, ಕವಿಯೆಂದು ಹೆಸರು ಮಾಡಿದವನು. ಹಲವು ಪ್ರಶಸ್ತಿಗಳನ್ನೂ ಪಡೆದುಕೊಂಡಿದ್ದಾನೆ. ನಾಡಿನ ಪ್ರಸಿದ್ಧ ಸಾಹಿತಿಗಳ ಸಾಲಿನಲ್ಲಿ ಮಹೇಶನ ಹೆಸರೂ ಗಣಿಸಲ್ಪಡುತ್ತಿದೆ. ನಮ್ಮ ಮ್ಯಾನೇಜರ್ ಮಠಪತಿ ಸಾಹೇಬರೂ ಇತ್ತೀಚೆಗೆ ಕೆಲವು ಕವಿತೆಗಳನ್ನು ಬರೆಯುತ್ತಿದ್ದಾರೆ. ಮೊನ್ನೆ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಹಿರಿಯ ಸಾಹಿತಿ ಮಹೇಶ ಅವರು ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ವೇದಿಕೆಯ ಮಧ್ಯಭಾಗದಲ್ಲಿ ಸರ್ವಾಧ್ಯಕ್ಷರೊಂದಿಗೆ ಕುಳಿತಿದ್ದರೆ, ಕಿರಿಯ ಕವಿ ಮಠಪತಿ ಸಾಹೇಬರು ಸಾಲಿನ ಕೊನೆಯ ಕುರ್ಚಿಯಲ್ಲಿ ಕುಳಿತುಕೊಳ್ಳಬೇಕಾಗಿ ಬಂತು. ತಕ್ಷಣವೇ ಸಾಹೇಬರ ಪ್ರೋಟೋಕಾಲ್ ಪ್ರಜ್ಞೆ ಜಾಗೃತವಾಗಿಯೇ ಬಿಟ್ಟಿತು! ಆಫೀಸಿನಲ್ಲಿ ತಮ್ಮೆದುರು ಕೈಕಟ್ಟಿ ನಿಲ್ಲಬೇಕಾದ ಒಬ್ಬ ಸಾಮಾನ್ಯ ಗುಮಾಸ್ತನ ಅಧ್ಯಕ್ಷತೆಯಲ್ಲಿ ತಾವು ಕವನವನ್ನು ಓದುವುದೆ? ಅವನು ವೇದಿಕೆಯ ಮಧ್ಯಭಾಗದಲ್ಲಿ ಜಗಮಗಿಸುವ ಸಿಂಹಾಸನದಲ್ಲಿ ಕುಳಿತಿರಬೇಕಾದರೆ ತಾವು ಸಾಲಿನ ತುದಿಯಲ್ಲಿ ಸಾಮಾನ್ಯ ಕುರ್ಚಿಯಲ್ಲಿ ಕುಳಿತುಕೊಳ್ಳುವುದೆ? ಸಾಹೇಬರಿಗೆ ಕೋಪ, 'ಭುಗಿಲ್' ಎಂದಿತು. ನಿರೂಪಕರು ತಮ್ಮ ಹೆಸರನ್ನು ಕರೆಯುತ್ತಿದ್ದರೂ ಕೇಳಿಸಿಕೊಳ್ಳದವರಂತೆ ಸಭಾಂಗಣದಿಂದ ಹೊರನಡೆದೇ ಬಿಟ್ಟರು!

ಇತ್ತೀಚೆಗೆ ಇನ್ನೊಂದು ಘಟನೆ ನಡೆಯಿತು. ನಮ್ಮ ಶಾಸಕರೊಬ್ಬರು ಸಮಾರಂಭವೊಂದರಲ್ಲಿ ಭಾಗವಹಿಸಿದ್ದರು. ತುರ್ತು ಕಾರ್ಯದ ನಿಮಿತ್ತ ಬೇರೆಡೆಗೆ ತೆರಳಬೇಕಾಗಿದೆಯೆಂದು ಹೇಳಿ ಎಲ್ಲರಿಗಿಂತಲೂ ಮೊದಲೇ ತಮ್ಮ ಭಾಷಣವನ್ನು ಮುಗಿಸಿ ವೇದಿಕೆಯಿಂದ ಕೆಳಗಿಳಿದು ಹೋದರು. ನಾಡಿನ ಪ್ರಖ್ಯಾತ ಹಿರಿಯ ಸಾಹಿತಿಯೊಬ್ಬರು ವಿಶೇಷ ಉಪನ್ಯಾಸಕರಾಗಿ ಆಗಮಿಸಿದ್ದರು. ಶಾಸಕರು ವೇದಿಕೆಯಿಳಿದು ಹೋದ ತರುವಾಯ ಸಾಹಿತಿಗಳ ಉಪನ್ಯಾಸ ಆರಂಭವಾಯಿತು. ವೇದಿಕೆಯ ಮೇಲಿದ್ದವರನ್ನಷ್ಟೇ ಸಂಬೋಧಿಸಿ ಅವರು ತಮ್ಮ ಉಪನ್ಯಾಸವನ್ನು ಆರಂಭಿಸಿದರು. ಇನ್ನೂ ವೇದಿಕೆಯ ಪಕ್ಕದಲ್ಲಿಯೇ ತಮ್ಮ ಬೆಂಬಲಿಗರೊಂದಿಗೆ ಹರಟೆ ಕೊಚ್ಚುತ್ತಿದ್ದ ಶಾಸಕರ ಪ್ರೋಟೋಕಾಲ್ ಪ್ರಜ್ಞೆ ಜಾಗೃತವಾಯಿತು! ಉಪನ್ಯಾಸಕರು ಆಮಂತ್ರಣ



ಪತ್ರಿಕೆಯಲ್ಲಿದ್ದರೂ ತಮ್ಮ ಹೆಸರನ್ನು ಹೇಳಲಿಲ್ಲವೆಂದು ಕೋಪ ಅಮರಿ ಕೊಂಡಿತು. ತಡ ಮಾಡದೇ ತತ್ಕ್ಷಣವೇ ವೇದಿಕೆಯನ್ನೇರಿ ಗಂಭೀರವಾಗಿ ಉಪನ್ಯಾಸ ನೀಡುತ್ತಿದ್ದ ಸಾಹಿತಿಗಳನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದು ಕೊಂಡು, ಆಡಬಾರದ ಮಾತುಗಳನ್ನಾಡಿ ಅವರನ್ನು ನಿಂದಿಸಿ ಕೆಳಗಿಳಿದು ಹೋದರು!

ಈ ರಾಜತಾಂತ್ರಿಕ ಶಿಷ್ಟಾಚಾರವು ಸಂಘಟಕರಿಗೂ, ಅಧಿಕಾರಸ್ಥರಿಗೂ ಕೆಲವೊಮ್ಮೆ ಧರ್ಮಸಂಕಟವನ್ನು ತಂದಿಡುವುದಾದರೂ ಅವರವರ ಅಧಿಕಾರಕ್ಕನುಗುಣವಾಗಿ ಸ್ಥಾನಮಾನವನ್ನು ನೀಡದಿರುವುದಕ್ಕಾಗುತ್ತದೆಯೆ? ಸಭೆಸಮಾರಂಭ, ಕಚೇರಿ, ಸರ್ಕಾರಗಳೆಂದ ಮೇಲೆ ಪ್ರಮುಖ ಸ್ಥಾನಗಳೂ, ಪ್ರಮುಖವಲ್ಲದ ಸ್ಥಾನಗಳೂ ಇರುವುದು ಸಹಜವೇ. ಅವುಗಳಿಗನುಗುಣವಾಗಿ ಅಧಿಕಾರಸ್ಥರಿಗೂ ಸ್ಥಾನಮಾನಗಳನ್ನು ನೀಡಬೇಕೆಂಬುದೂ ಸರಿಯಾದ ಕ್ರಮವೇ. ಆದರೆ ಕೇವಲ ಪ್ರೋಟೋಕಾಲ್ ಮೋಹಕ್ಕೆ ಬಿದ್ದು ಮಾನವೀಯತೆಯನ್ನು ಮರೆಯಬಾರದು. ಸುತ್ತಲಿನ ಜನರನ್ನು, ಕೆಳಹಂತದ ಉದ್ಯೋಗಿಗಳನ್ನು ಇಕ್ಕಟ್ಟಿನಲ್ಲಿ ಸಿಲುಕಿಸುವ ಮಟ್ಟಕ್ಕೆ ಪ್ರೋಟೋಕಾಲ್ ಆಗಲೀ ಅಥವಾ ಇನ್ನಾವುದೇ ವ್ಯಾಮೋಹವನ್ನಾಗಲೀ ಬೆಳೆಸಿಕೊಳ್ಳುವುದು ತರವಲ್ಲ. ಏನಂತೀರಿ?